ಜಿಲ್ಲಾ ಪುನರ್‌ವಿಂಗಡಣೆ

೧೨೬೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ ಯೋಜನಾ, ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರ ನೇಮಿಸಿದ್ದ ಜಿಲ್ಲಾ ಪುನರ್ ವಿಂಗಡಣಾ ಸಲಹಾ ಸಮಿತಿಗಾಗಿ ಇದುವರೆವಿಗೂ ವೆಚ್ಚ ಮಾಡಿದ ಹಣವೆಷ್ಟು ?

ಆ) ಈ ಸಮಿತಿಯು ತನ್ನ ವರದಿಯಲ್ಲಿ ಎಷ್ಟು ನೂತನ ಜಿಲ್ಲೆಗಳು ಹಾಗೂ ತಾಲ್ಲೂಕುಗಳ ರಚನೆಗಾಗಿ ಶಿಫಾರಸ್ಸು ಮಾಡಿದೆ,

ಇ) ಈ ನೂತನ ಜಿಲ್ಲೆ ಹಾಗೂ ತಾಲ್ಲೂಕುಗಳ ರಚನೆಗಾಗಿ ಸರ್ಕಾರಕ್ಕೆ ವೆಚ್ಚವಾಗುವ ಹಣದ ಮೊತ್ತವೆಷ್ಟು ?

ಶ್ರೀ ಎಸ್. ಆರ್, ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಒಟ್ಟು ವೆಚ್ಚ ರೂ. ೧೧,೧೬,೩೨೮–೩೫

ಆ) ೯ ನೂತನ ಜಿಲ್ಲೆಗಳು ಹಾಗೂ ೩೦ ಹೊಸ ತಾಲ್ಲೂಕುಗಳ ರಚನೆಗಾಗಿ ಶಿಫಾರಸ್ಸು ಮಾಡಲಾಗಿದೆ.

ಇ) ಒಟ್ಟು ಅಂದಾಜು ವೆಚ್ಚ ರೂ. ೬೪.೫೮ ಕೋಟಿ ರೂಪಾಯಿಗಳು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ ಮಾನ್ಯ ಅಧ್ಯಕ್ಷರೇ ಜಿಲ್ಲಾ ಮತ್ತು ತಾಲ್ಲೂಕು ಪುನರ್ ವಿಂಗಡಣೆ ಬಗ್ಗೆ ಸಮಿತಿಗಳ ಮೇಲೆ ಸಮಿತಿಗಳನ್ನು ನೇಮಕ ಮಾಡಿದರು. ೧೯೭೬ನೇ ಇಸವಿಯಲ್ಲಿ ವಾಸುದೇವರಾಯರ ಸಮಿತಿ, ೧೯೮೩ನೇ ಇಸವಿಯಲ್ಲಿ ಹುಂಡೇಕರ್ ಸಮಿತಿಯನ್ನು ಮತ್ತು ಗದ್ದಿಗೌಡರ ಸಮಿತಿಗಳನ್ನು ನೇಮಕ ಮಾಡಿ ಆ ಸಮಿತಿಗಳವರು ವರದಿ ಕೊಟ್ಟಿದ್ದರೂ ಸಹ ಇದುವರೆವಿಗೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ಅವರು ಕೊಟ್ಟ ವರದಿಯ ಪ್ರಕಾರ ಪುನರ್ ವಿಂಗಡಣಾ ಕೆಲಸ ಕಾರ್ಯರೂಪಕ್ಕೆ ಯಾವಾಗ ಬರುತ್ತದೆ ? ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವಂತೆ ಸಮಿತಿಗಳನ್ನು ನೇಮಕ ಮಾಡಿ ಆಶ್ವಾಸನೆಗಳನ್ನು ಕೊಡುತ್ತಿರುವುದು ಸರಿಯಲ್ಲ. ಅಲ್ಲಿ ತಾಲ್ಲೂಕು ಮಾಡುತ್ತೇವೆ, ಇಲ್ಲಿ ಜಿಲ್ಲೆ ಮಾಡುತ್ತೇವೆಂದು ತಾವು ಹೇಳಿದ್ದೀರಿ, ಅದರ ಬಗ್ಗೆ ಏನಾಗಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವರದಿಯನ್ನು ಸಾರ್ವಜನಿಕರ ಅವಗಾಹನೆಗಾಗಿ ಪಬ್ಲಿಷ್ ಮಾಡಿದ್ದೇವೆ. ಆದಷ್ಟು ಬೇಗ ಇದರ ಬಗ್ಗೆ ಸರ್ಕಾರವು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಹಂತ ಹಂತವಾಗಿ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ಮೊದಲು ಇದಕ್ಕಾಗಿ ವಾಸುದೇವಮೂರ್ತಿ ಸಮಿತಿ ಮಾಡಲಾಗಿತ್ತು. ನಂತರ ಹುಂಡೇಕರ್‌ರವರ ಸಮಿತಿ ಮಾಡಲಾಯಿತು. ನಂತರ ಇನ್ನೊಬ್ಬರ ಸಮಿತಿಯನ್ನು ಮಾಡಲಾಗಿದೆ. ಇದೇ ವಿಷಯ ನಮ್ಮ ಮುಂದೆ ಸುಮಾರು ೨೦ ವರ್ಷಗಳಿಂದಲೂ ಇದೆ. ಆದಷ್ಟು ಬೇಗ ಇದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಳ್ಳಬೇಕು. ಸಮಿತಿಯವರು ನೀಡಿರುವ ವರದಿಯಲ್ಲಿ ಏನು ಶಿಫಾರಸ್ಸುಗಳು ಇವೆಯೋ ಅವುಗಳ ಬಗ್ಗೆ ಸರ್ಕಾರ ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳದೆ ನಿಧಾನ ಮಾಡುವುದು ಸರಿಯಲ್ಲ. ಇದೇ ತರಹ ಅನಿಶ್ಚಿತತೆಯ ಪರಿಸ್ಥಿತಿಯಲ್ಲಿ ಇನ್ನೆಷ್ಟು ದಿವಸ ಇರಬೇಕು ? ಈಗ ಮಾನ್ಯ ಸದಸ್ಯರು ಸರಿಯಾದ ಪ್ರಶ್ನೆಯನ್ನು ಕೇಳಿದ್ದಾರೆ. ಅದರ ಬಗ್ಗೆ ತಾವು ಸಗಾರವಾದ ಉತ್ತರ ಕೊಡದೆ ಭಾರವಾದ ಉತ್ತರವನ್ನು ಕೊಡಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ. ಯಾವತ್ತು ಹಂತ್ತು ಹೇಗೆ ತೀರ್ಮಾನ ತೆಗೆದು ಕೊಳ್ಳಲಾಗುತ್ತದೆಂದು ಈ ಸದನಕ್ಕೆ ತಿಳಿಸಿದರೆ ಉಪಕಾರವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಇನ್ನು ಒಂದು ಅಥವಾ ಎರಡು ತಿಂಗಳೊಳಗೆ ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗುತ್ತೇನೆ.

ಶ್ರೀ ವಿಶ್ವನಾಥ್‌ರೆಡ್ಡಿ ವಂದ್ಲಾಳ್.—ಬಾಗಲಕೋಟೆಯನ್ನು ಜಿಲ್ಲಾ ಕೇಂದ್ರವಾಗಿ ಮಾಡಲಾಗಿದೆಯೆಂದು ಒಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅದು ನಿಜವೇ ಹೇಗೆ ? ಬಾಗಲಕೋಟೆಯನ್ನು ಜಿಲ್ಲಾ ಕೇಂದ್ರವಾಗಿ ಮಾಡಿದ್ದಲ್ಲಿ, ವರದಿಯ ಪ್ರಕಾರ ಇತರ ಜಿಲ್ಲೆಗಳನ್ನು ಮಾಡದೇ ಬಿಟ್ಟು ಅದನ್ನು ಮಾತ್ರ ಏಕೆ ಮಾಡಿದಿರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಇನ್ನೂ ಮಂತ್ರಿಮಂಡಲದ ಮುಂದೆಯೇ ತೆಗೆದುಕೊಂಡಿಲ್ಲ. ಪತ್ರಿಕೆಯಲ್ಲಿ ಆ ರೀತಿ ವರದಿ ಬಂದಿದ್ದರೆ ಅದು ಸರಿಯಾದ ವರದಿಯಲ್ಲ. ಜಿಲ್ಲೆಗಳನ್ನು ಮಾಡುವಾಗ ಸಮಗ್ರವಾಗಿ ನಿರ್ಣಯ ತೆಗೆದುಕೊಳ್ಳಿತ್ತೇವೆ.

ಅಧ್ಯಕ್ಷರು.—ಶ್ರೀ ವಿ. ಎಂ. ಹಿಂಡಸಗೇರಿ (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಟಿ. ಎಸ್. ಮಣಿ.—(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಬಿ. ಎಸ್. ಯಡಿಯೂರಪ್ಪ.—(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.)

ಶ್ರೀ ಡಿ. ಟಿ. ಜಯಕುಮಾರ್.— (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.) ಶ್ರೀ ಜಿ. ರಾಜುಗೌಡರವರು.

ಚುಕ್ಕೆ ಪ್ರಶ್ನೆ ಸಂಖ್ಯೆ ೪೨೫ (೧೩೮೭)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರ ಕೊಡಲು ಸಮಯಬೇಕು. ಎಲ್ಲಾ ಜಿಲ್ಲೆಯ ಮಾಹಿತಿ ಕೇಳಿರುವುದರಿಂದ, ಜಿಲ್ಲಾ ಕೇಂದ್ರಗಳಿಂದ ಇನ್ನೂ ಮಾಹಿತಿ ಬಂದಿಲ್ಲ.

ಶ್ರೀ ಜಿ. ರಾಜುಗೌಡ.—ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆ ಸಿ. ಮತ್ತು ಡಿ. ವರ್ಗದ ಭೂಮಿಯನ್ನು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಗೆ ವರ್ಗ ಮಾಡಿದ್ದಾರೆ ಎಂಬುದೆನ್ನು ಹೇಳುವುದಕ್ಕೆ ಇಷ್ಟು ಸಮಯಬೇಕೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾ ಕೇಂದ್ರಗಳಿಂದ ಇನ್ನೂ ಮಾಹಿತಿ ಬಂದಿಲ್ಲ. ಮಾಹಿತಿ ಬಂದಮೇಲೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಪಾಟೀಲ್ (ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ.) ಶ್ರೀ ಜಿ. ಎಸ್. ಆಚಾರ್‌ರವರು.

ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ.

೧೩೪೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ, ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊಸ ಜಿಲ್ಲೆ ಮತ್ತು ತಾಲ್ಲೂಕುಗಳ ರಚನೆಗಾಗಿ ಸಲಹೆ ಮಾಡಲು ರಚಿಸಲಾದ ಸಮಿತಿ ಈಗಾಗಲೇ ವರದಿ ಸಲ್ಲಿಸಿದ್ದರೂ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಆ) ದಕ್ಷಿಣ ಕನ್ನಡ ಜಿಲ್ಲೆಯನ್ನು ವಿಭಜಿಸಲು ಹಾಗೂ ಅಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ನೀಡಿರುವ ಸಲಹೆಗಳಾವುವು ?

ಇ) ಸದರಿ ವರದಿಯನ್ನು ಅನುಷ್ಠಾನಕ್ಕೆ ತರುವುದೆಂದು ?